**ಕರ್ನಾಟಕ ಸರ್ಕಾರ**

**ಕಾಲೇಜು ಶಿಕ್ಷಣ ಇಲಾಖೆಯ ನಡವಳಿಗಳು**

ವಿಷಯ: ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ನ್ಯಾಕ್ ಪ್ರಕ್ರಿಯೆಗಾಗಿ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಉಲ್ಲೇಖ:
1. ಸರ್ಕಾರಿ ಅನುದಾನ ಬಿಡುಗಡೆ ಆದೇಶ ಸಂಖ್ಯೆ ಇಡಿ/60/ಹೆಚ್‌ಪಿಸಿ/2018. ಬೆಂಗಳೂರು ದಿನಾಂಕ: 09.04.2018.
2. ಇಲಾಖೆಯ ನ್ಯಾಕ್ ಮತ್ತು ರಾಜ್ಯ ಗುಣಮಟ್ಟ ಭರವಸಾ ಕೋಶದ ಸಮನ್ವಯಾಧಿಕಾರಿಗಳ ಸಲ್ಲಿಕೆ-04 ದಿನಾಂಕ: 30.05.2018.

**********

**ಪ್ರಸ್ತಾವನೆ:**

ಕಾಲೇಜು ಶಿಕ್ಷಣ ಇಲಾಖೆಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು ನ್ಯಾಕ್ ಮೌಲ್ಯಮಾಪನ ಮತ್ತು ಮರು ಮೌಲ್ಯಮಾಪನಕ್ಕೆ ಒಳಪಡುವುದು ಅವಶ್ಯವಿರುವ ಹಿನ್ನೆಲೆಯಲ್ಲಿ ಮಾನ್ಯತೆಗೆ ಒಳಪಡುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಅನುದಾನವನ್ನು ಉಲ್ಲೇಖ(1) ರ ಸರ್ಕಾರಿ ಆದೇಶದಲ್ಲಿ ಇಲಾಖೆಗೆ 2018-19 ರ ಸಾಲಿನಲ್ಲಿ **"ರಾಷ್ಟ್ರೀಯ ಅಂಗೀಕೃತ ಪರಿಷತ್ತು"** ಕಾರ್ಯಕ್ರಮದಡಿಯಲ್ಲಿ ಲೆಕ್ಕಶೀರ್ಷಿಕೆ 2202-03-112-0-09-059(ಯೋ) ರಲ್ಲಿ ಒದಗಿಸಲಾಗಿರುತ್ತದೆ. ಸದರಿ ಅನುದಾನದ ಮಿತಿಯೊಳಗೆ ಗುರುತಿಸಲಾಗಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ IIQA, ಮೌಲ್ಯಮಾಪನ ಶುಲ್ಕ & ವರದಿ ತಯಾರಿಕೆ, ಪೀರ್ ತಂಡದ ಭೇಟಿ ವೆಚ್ಚಕ್ಕಾಗಿ ಅನುದಾನ ಬಿಡುಗಡೆ ಮಾಡಲು ಈ ಆದೇಶ.

**ಆದೇಶ ಸಂಖ್ಯೆ:ಕಾಶಿಇ/02/ ನ್ಯಾಕ್.ಅನುದಾನ/2018-19, ಬೆಂಗಳೂರು ದಿ:14.06.2018.**

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ, ನ್ಯಾಕ್ ಮಾನ್ಯತೆಗಾಗಿ ಮೌಲ್ಯಮಾಪನ ಮತ್ತು ಮರು ಮೌಲ್ಯಮಾಪನಕ್ಕೆ ಒಳಪಡಲು ಅರ್ಹತೆ ಇರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ IIQA ಮೌಲ್ಯಮಾಪನ ಶುಲ್ಕ & ವರದಿ ತಯಾರಿಕೆ, ಪೀರ್ ತಂಡದ ಭೇಟಿ ವೆಚ್ಚ ಭರಿಸಲು ಅನುದಾನವನ್ನು **"ರಾಷ್ಟ್ರೀಯ ಅಂಗೀಕೃತ ಪರಿಷತ್ತು"** ಕಾರ್ಯಕ್ರಮದಡಿಯಲ್ಲಿ ಲೆಕ್ಕಶೀರ್ಷಿಕೆ **2202-03-112-0-09-059(ಯೋ)** ರಡಿಯಲ್ಲಿ ಒದಗಿಸಿರುವ ಅನುದಾನದ ಮಿತಿಯೊಳಗೆ ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಬಿಡುಗಡೆ ಮಾಡಲಾಗಿದೆ ಹಾಗೂ ಸದರಿ ಅನುದಾನವನ್ನು ನಿಯಮಾನುಸಾರ ಬಳಸಿಕೊಳ್ಳಲು ಸಂಬಂಧಿಸಿದ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ಅನುಮತಿ ನೀಡಲಾಗಿದೆ.

**ಪ್ರಸ್ತುತ ವರ್ಷದಲ್ಲಿ ನ್ಯಾಕ್ ಮಾನ್ಯತೆಗೆ ಒಳಪಡಬೇಕಾದ ಕಾಲೇಜುಗಳು**

| ಕ್ರ.ಸಂ | ಕಾಲೇಜಿನ ಹೆಸರು | ಐಐಕ್ಯೂಎ | ಮೌಲ್ಯಮಾಪನ ವರದಿ | ಮೌಲ್ಯಮಾಪನ ಶುಲ್ಕ | ಪೀರ್ ತಂಡದ ಭೇಟಿ ವೆಚ್ಚ | ಒಟ್ಟು ಮೊತ್ತ |
|---|---|---|---|---|---|---|
| 1 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಶ್ರೀನಿವಾಸಪುರ - 563 135 | 29500 | 30000 | 218300 | – | 277800 |
| 2 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೃಷ್ಣರಾಜನಗರ-57160 | 29500 | 30000 | 218300 | – | 277800 |
| 3 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಭದ್ರಾವತಿ - 577 301 | 29500 | 30000 | 218300 | – | 277800 |

| | | | | | | |
|---|---|---|---|---|---|---|
| 4 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಭರಮಸಾಗರ, ಚಿತ್ರದುರ್ಗ ತಾ:- 577519 | 29500 | 30000 | 218300 | – | 277800 |
| 5 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಜಗಳೂರು-577528 | 29500 | 30000 | 218300 | – | 277800 |
| 6 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬೆಳ್ಳಾರೆ-574212 | 29500 | 30000 | 218300 | – | 277800 |
| 7 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ವಿಟ್ಲ - 574 243 | 29500 | 30000 | 218300 | – | 277800 |
| 8 | ಶ್ರೀ. ಕಾಳಾವರ ವರದರಾಜ್ ಎಂ ಶೆಟ್ಟಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕುಂದಾಪುರ-576201 | 29500 | 30000 | 218300 | – | 277800 |
| 9 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಶಿಗ್ಗಾಂವ್-581205 | 29500 | 30000 | 218300 | – | 277800 |
| 10 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಾಗಲಕೋಟೆ | 29500 | 30000 | 218300 | – | 277800 |
| 11 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ದೊಡ್ಡಬಳ್ಳಾಪುರ- 561203 | 29500 | 30000 | 218300 | – | 277800 |
| 12 | ಶ್ರೀಮತಿ ಮತ್ತು ಶ್ರೀ ವೈ.ಇ ರಂಗಯ್ಯಶೆಟ್ಟಿ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಪಾವಗಡ - 561 202 | 29500 | 30000 | 218300 | – | 277800 |
| 13 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮುಳಬಾಗಿಲು-563131 | 29500 | 30000 | 218300 | – | 277800 |
| 14 | ಶ್ರೀ ಮಹದೇಶ್ವರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೊಳ್ಳೇಗಾಲ- 571440 | 29500 | 30000 | 218300 | – | 277800 |
| 15 | ಡಾ.ಜಿ.ಶಂಕರ್ ಬಾಲಕಿಯರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು & ಸ್ನಾತಕೋತ್ತರ ಕೇಂದ್ರ, ಅಜ್ಜರಕಾಡು ಉಡುಪಿ 576106, | 29500 | 30000 | 218300 | – | 277800 |
| 16 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ತುಮಕೂರು | 29500 | 30000 | 218300 | – | 277800 |
| 17 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಲಿಂಗಸಗೂರು-584122 | 29500 | 30000 | 218300 | 177000 | 454800 |
| 18 | ಸರ್ಕಾರಿ ಕಲಾ ಕಾಲೇಜು, ಹಾಸನ- 573 201 | 29500 | – | 109150 | 177000 | 315650 |
| 19 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು,ಮಲ್ಲೇಶ್ವರಂ ಬೆಂಗಳೂರು- 560 012 | – | – | 218300 | - | 218300 |
| 20 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೊಸಪೇಟೆ-583201 | – | – | 218300 | - | 218300 |
| 21 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೆ.ಆರ್.ಪುರಂ, ಬೆಂಗಳೂರು- 560036. | – | – | 109150 | 177000 | 286150 |
| 22 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಾಲ್ಕಿ-585328 | – | – | 109150 | 177000 | 286150 |
| 23 | ಸರ್ಕಾರಿ ವಿಜ್ಞಾನ ಕಾಲೇಜು, ಹಾಸನ- 573 201 | – | – | – | 177000 | 177000 |
| 24 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಬೆಟ್ಟಂಪಾಡಿ - 574 259 | – | – | – | 177000 | 177000 |

| | | | | | | |
|---|---|---|---|---|---|---|
| 25 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕುಶಾಲನಗರ-571234 | – | – | – | 177000 | 177000 |
| 26 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೊಸದುರ್ಗ-577527 | – | – | – | 177000 | 177000 |
| 27 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚಾಮರಾಜನಗರ-571 313 | – | – | – | 177000 | 177000 |
| | | | | | ಒಟ್ಟು ಮೊತ್ತ | 71,09,150 |
| (ರೂಪಾಯಿ ಎಪತ್ತೊಂದು ಲಕ್ಷದ ಒಂಬತ್ತು ಸಾವಿರದ ಒಂದು ನೂರ ಐವತ್ತು ಮಾತ್ರ) | | | | | | |

ಷರತ್ತುಗಳು:-

1. ಖರೀದಿಗಳಗೆ ಸಂಬಂಧಿಸಿದಂತೆ ಎಲ್ಲಾ ಖರೀದಿ ನಿಯಮಗಳನ್ನು ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆಧ್ಯಾದೇಶ 2000ರ (ಕೆ.ಟಿ.ಪಿ.ಪಿ) ಮತ್ತು ಅದರಡಿಯಲ್ಲಿ ನಿಯಮಗಳನ್ನು ಚಾಚು ತಪ್ಪದೇ ಕಡ್ಡಾಯವಾಗಿ ಹಾಗೂ ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು,
2. ಈ ವೆಚ್ಚವನ್ನು 2019ರ ಮಾರ್ಚ್ ಮಾಹೆಯೊಳಗೆ ಎಲ್ಲಾ ಪ್ರಚಲಿತ ನಿಯಮಗಳನ್ನು ಪಾಲಿಸಿ ಭರಿಸುವುದು.
3. ಬಿಡುಗಡೆ ಮಾಡಿರುವ ಅನುದಾನವನ್ನು ಕಾಲೇಜಿನ NAAC/ IQAC ಖಾತೆಯಲ್ಲಿ ಜಮೆ ಮಾಡಿ, ನ್ಯಾಕ್ ಮೌಲ್ಯಮಾಪನ ಶುಲ್ಕ (ರೂ 29500+218300) ಗಳನ್ನು ಡಿ.ಡಿ ಮುಖಾಂತರ Director-NAAC ಇವರ ಹೆಸರಿಗೆ ಪಾವತಿಸುವುದು.
4. ಮೌಲ್ಯಮಾಪನ ವರದಿ ತಯಾರಿಕೆ ಸಂಬಂಧ ಬಿಡುಗಡೆಗೊಳಸಿರುವ ರೂ 30000/- ಅನುದಾನವನ್ನು ವರದಿ ತಯಾರಿಸಲು, ದಾಖಲೀಕರಣ, ಪೀರ್ ತಂಡದ ಭೇಟಿಗೆ ಅಗತ್ಯವಾದ ಕಡತಗಳ ನಿರ್ವಹಣೆ, ಲೇಖನಾ ಸಾಮಗ್ರಿ ಹಾಗೂ ಇತರೆ ಕಛೇರಿ ವೆಚ್ಚಕ್ಕಾಗಿ ಬಳಸತಕ್ಕದ್ದು.
5. ಈ ಅನುದಾನವನ್ನು ನ್ಯಾಕ್ ಮೌಲ್ಯಮಾಪನ ಪ್ರಕ್ರಿಯೆಗಳಗೆ ಮಾತ್ರ ಬಳಸತಕ್ಕದ್ದು.
6. ಬಿಡುಗಡೆ ಮಾಡಲಾದ ಅನುದಾನದ ಖರ್ಚು-ವೆಚ್ಚಗಳನ್ನು ಲೆಕ್ಕ ತಪಾಸಣೆಗೆ ಒಳಪಡಿಸತಕ್ಕದ್ದು.
7. ಬಿಡುಗಡೆ ಮಾಡಲಾದ ಅನುದಾನದ ಬಳಕೆಯ ಬಗ್ಗೆ ಕರ್ನಾಟಕ ಆರ್ಥಿಕ ಸಂಹಿತೆ, ನಿಯಮ 161 ರನ್ವಯ ನಿಗದಿತ ನಮೂನೆಯಲ್ಲಿಯೇ "ಹಣ ಬಳಕೆಯ ಪ್ರಮಾಣ ಪತ್ರ" ಗಳನ್ನು ಸಿದ್ಧಪಡಿಸಿ, ಪ್ರಾದೇಶಿಕ ಜಂಟಿ ನಿರ್ದೇಶಕರ ಮೇಲು ಸಹಿಯೊಂದಿಗೆ ಕಡ್ಡಾಯವಾಗಿ 2019ರ ಏಪ್ರಿಲ್ ಮಾಹೆಯ ಅಂತ್ಯದೊಳಗೆ ಈ ಕಛೇರಿಗೆ ಸಲ್ಲಿಸತಕ್ಕದ್ದು.

ಈ ಮೇಲ್ಕಂಡ ಷರತ್ತುಗಳನ್ನು ಕಡ್ಡಾಯವಾಗಿ ಪಾಲಿಸಿ, ಬಿಡುಗಡೆಯಾದ ಅನುದಾನವನ್ನು ಸದ್ಬಳಕೆ ಮಾಡಿಕೊಳ್ಳುವಲ್ಲಿ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು ಹಾಗೂ ಈ ಷರತ್ತುಗಳು ಉಲ್ಲಂಘನೆಯಾದಲ್ಲಿ ಸಂಬಂಧಿಸಿದ ಕಾಲೇಜುಗಳ ಪ್ರಾಂಶುಪಾಲರುಗಳನ್ನೇ ನೇರ ಹೊಣೆಗಾರರನ್ನಾಗಿ ಮಾಡಲಾಗುವುದು.

ಕಾಲೇಜು ಶಿಕ್ಷಣ ಆಯುಕ್ತರು

ಇವರಿಗೆ:

1. ಸಂಬಂಧಿಸಿದ ಕಾಲೇಜುಗಳ ಪ್ರಾಂಶುಪಾಲರುಗಳಗೆ.
2. ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ಬೆಂಗಳೂರು, ಮೈಸೂರು, ಶಿವಮೊಗ್ಗ, ಮಂಗಳೂರು, ಗುಲ್ಬರ್ಗಾ ಮತ್ತು ಧಾರವಾಡ ಮಾಹಿತಿ ಹಾಗೂ ತಮ್ಮ ವ್ಯಾಪ್ತಿಯ ಕಾಲೇಜುಗಳ ಪೀರ್ ತಂಡದ ಭೇಟಿ ದಿನದಂದು ಕಾಲೇಜಿನಲ್ಲಿ ಉಪಸ್ಥಿತರಿರಲು ಸೂಚಿಸಲಾಗಿದೆ.
3. ಖಜಾನಾಧಿಕಾರಿಗಳು, ರಾಜ್ಯ ಹುಜೂರ್‌ಖಜಾನೆ, ಬೆಂಗಳೂರು.
4. ಲೆಕ್ಕಾಧಿಕಾರಿಗಳು, ಕೇಂದ್ರ ಕಛೇರಿ, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು.
5. ಸಮನ್ವಯಾಧಿಕಾರಿಗಳು-ರಾಜ್ಯ ಗುಣಮಟ್ಟ ಭರವಸಾ ಕೋಶ- ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.
6. ಮ್ಯಾನೇಜರ್/ಅಧೀಕ್ಷಕರು, ಯೋಜನಾ ವಿಭಾಗ, ಕೇಂದ್ರ ಕಛೇರಿ, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು..
7. ಮಾಹಿತಿ ಅಧಿಕಾರಿಗಳು, ಕೇಂದ್ರ ಕಛೇರಿ, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು ಈ ಆದೇಶವನ್ನು ಇಲಾಖೆಯ ವೆಬ್-ಸೈಟ್ ನಲ್ಲಿ ಪ್ರಕಟಿಸಲು ಸೂಚಿಸಲಾಗಿದೆ.
8. ಕಛೇರಿ ಪ್ರತಿ.